ಅಪ್ಪನ ದೇವ್ರು ನೋಡಿದ. ದೇವ್ರು ಒಂದಿಷ್ಟೂ ಬದಲಾಗಿರಲಿಲ್ಲ. ಮೈತುಂಬ ಬಣ್ಣಬಣ್ಣದ ಹೂದಂಡಿ, ಬಟ್ಟೆಯಿಂದ ಘಮ್ಮಂತ ಬರುತಿತ್ತು. ಗುಡಿತುಂಬ ಲೋಬಾನದ ಹೊಗಿ ಬಿಗಿದಿತ್ತು. ಕಣ್ಣಿಟ್ಟು ಕೂತ ಬೀರನಿಗೆ ಅಪ್ಪನ ದೇವ್ರು ಕೈಮಾಡಿ ಕರದಂಗಾತು. ಮುಗಿಬಿದ್ದ ಭಕ್ತರು ನೂಕಿದಂಗಾತು. ದೇವ್ರು ಮೈಮ್ಯಾಗಿನ ಹೂವ್ವ, ತೊಟ್ಲಗೊಂಚಲು, ಬಣ್ಣಬಣ್ಣದ ದಟ್ಟಿ, ಬಂಗಾರದ ಮುಖ ಕಲಕಲ ನಕ್ಕಂಗಾದ್ವು. ಇದನ್ನೆಲ್ಲಾ ನೋಡುತಿದ್ದಂತೆ ಮೈಮ್ಯಾಲ ಯಾರೋ ಹೊಕ್ಕು ಆವರಿಸಿದಂಗಾತು. ಒಮ್ಮೆಲೆ ಕೈಯಗಲಮಾಡಿ ಗಿಮಿಗಿಮಿ ಒಂಟಿ ಕಾಲಿಲೇ ಕುಣಿ ಸುತ್ತುವರೆದ.

ಸಮಾಧಾನ ಆಗಲಿಲ್ಲ. ಹೊಟ್ಟ್ಯಾಗ ಸಂಕ್ಟ ಇಟ್ಟಂತಾಗಿ ಮೈಮುರಿದ. ಕಣ್ಣು ಕೆಂಡದಂಗ ಉಂಡೆಯಾಗಿಸಿದ. ಜಿಗಿಜಿಗಿದು ಕುಪ್ಪಣಿಸಿದ. ಅಗಸಿಮುಂದನೇ ಏಳು ಅಂಕಣದ ಅರಮನಿಯಂತಿದ್ದ ಗೌಡ್ರುಮನಿಯೊಳಗ ತಲಬಾಗ್ಲು ದಡಕ್ಕನ ತೆರೆದು ಹೊಕ್ಕ. ಒಳ ಬಂಕದಾಗ ಕೋಳಿ ನಿದ್ದ್ಯಾಗಿದ್ದ ಗೌಡ ದಿಗ್ಗನ ಎದ್ದುಕೂತ. ಬೀರ ಮನಿತುಂಬ ಕಪ್ಪಾರ್‌ಮುಳ್ಳ ತಿರುಗಿದ. ಚಟಚಟಂತ ಎದಿ ಬಡಕೊಂಡ. ಎದೆಯುಬ್ಬಿಸಿ ಬಸ್‌ಬುಸ್‌ಂತ ಉಸ್ರುಬಿಟ್ಟ. ಗೌಡ ಗಾಬರಿಗೊಂಡು ಭಕ್ತಿ ಪರವಶನಾಗಿ ಬೀರನ ಮೈಯ್ಯಾಗ ದಾನಪ್ಪ ಬಂದಿರಬೇಕಂತ ದಬದಬ ತುಂಬಿದ ಕೊಡ ನೀರು ಸುರುವಿ ಕೈಮುಗಿದ. ಬೀರನಿಗೆ ಸಮಾಧಾನ ಆಗಲಿಲ್ಲ. ಅಂಜು ಒಳಮನೆಲಿ ನಿಂತು ಏನುಮಾಡದ ಸ್ಥಿತಿಯಲ್ಲಿದ್ದಳು. ಏಕಾಏಕಿ ರಶೀದಸಾಬು ತನ್ನ ಭಕ್ತಾದಿಗಳ ತಂಡಕಟ್ಟಿ ಬೀರನಿಗೆ ಹಗ್ಗಕಟ್ಟಿಸಿಕೊಂಡು ಅಲ್ಲೈ ಕುಣಿಯತ್ತ ಬಂದ. 'ನಿನ್ ಮೈಯ್ಯಾಗ ಧಮ್ಮಿದ್ರ ಒಂತಾಸು ಬೆಂಕಿ ಕುಣ್ಯಾಗ ತಪಸ್ಸುಮಾಡಲೇ ಗೊಬ್ಬು ಸೂಳಿಮಗ.. ದೇವ್ರಂದ್ರ ಹುಡುಗಾಟ ಮಾಡಿದ್ಯಾ.. ಸುತ್ತ ನಾಕೂರು ಮಂದಿ ಸೇರ್ರೈತಿ.. ಹಿಂಗಮಾಡಿ ಊರು ಮಾನಮರ್ಯಾದಿ ತೆಗಿಬೇಕಂತ ಮಾಡಿದ್ಯಾ.. ಕುಣ್ಯಾಗ ನಿನ್‌ಮೈ ಸುಡಲಿಲ್ಲಂದ್ರ ಇವತ್ತು ಸವಾರಿ ಪಟ್ಟಾ ನಿನಗ.. ಮೈ ಸುಡ್ಲಿಲ್ಲಂದ್ರ ನಿನ್ ಹೆಣನಾ ಬಿಳುತ್ತ ನೋಡು..' ಅಂತ ಕುಣಿಯೊಳಗ ಕತ್ತು ಹಿಡಿದು ದಬ್ಬಿದ. ಒಮ್ಮೆಲೆ ಬೀರ ಕುಣಿಯೊಳಗ ಬೆಂಕ್ಯಾದ. ಕುಣಿಯೊಳಗಿಂದ ದಿಗಿದಿಗಿ ಎದ್ದವನೇ ಏಕಾ ಗುಡಿಯೊಳಗ ನುಗ್ಗಿದ. ದೈವ ಎಂಬುದು ಇನ್ನೇನು ಹಲಿಗಿ,ಬ್ಯಾಂಡುಬಾಜಿನೊಂದಿಗೆ ಜಾಕೀರ್‌ಹುಸೇನನ ಕೈಗೆ ದೇವ್ರು ನೀಡಲು ಮುಂದಾಗಿದ್ರು. ಬೀರ ಹೋದವನು ಅಪ್ಪನ ದೇವ್ರು ಕಸಗೊಂಡು ಎದಿ ಉಬ್ಬಿಸಿ ಹೊರಬಂದ. ಊರ್ಮಂದಿ ಹೌಹಾರಿದ್ರು. ಆಗಲೆ ಮಂದ್ಯಾಗ ಗಾಬರಿಗೊಂಡು ನಿಂತಿದ್ದ ಅಂಜುನ ಎಳಕೊಂಡು ಹೊಳಿದಂಡಿ ಕಡೆ ಒಂಟಿ ಕಾಲಿಲೆ ಓಡಿದ. ಊರಮಂದಿ ಬೊಂಬರಾಯಿಮೋಮ್ ದೂಲ್ಲಾ ದೂಲ್ಲಾಂತ ಹಿಂದಿಂದ ಹಲಿಗಿ, ಬ್ಯಾಂಡುಬಾಜಿನೊಂದಿಗೆ ಓಡತೊಡಗಿದ್ರು.

ಹೊಳಿ ಹತ್ತಿರವಾಗುತಿದ್ದಂತೆ ಬೀರ ಅಂಜುನ ಕೈ ಗಟ್ಟಿಯಾಗಿ ಹಿಡಿದು ಹೊಳಿಗೆ ನುಗ್ಗಿದ. ಮಳಿಗಾಲದ ಹೊಳಿ ಆಗಿದ್ರಿಂದ ಹೊಳೆಂಬುದು ಸಮತಟ್ಟಾಗಿ ಉಬ್ಬುಬ್ಬಿ ಬರುತ್ತಲೇ ಇತ್ತು. ಬೆಳದಿಂಗಳು ತಗ್ಗಿದಂತೆ ಹೊಳ್ಯಾಗ ಬೆಳಗಿನ ಕತ್ತಲು ಮೂಡತೊಡಗಿತ್ತು. ಹಕ್ಕಿಪಕ್ಕಿಗಳು ಚಿಂವ್‌ಗುಟ್ಟಿದ್ವು. ಆದ್ರ ದಂಡಿಮ್ಯಾಲ ಯಾರಿಗ್ಯಾರು ಕಾಣುತಿರಲಿಲ್ಲ. ತೆರೆಗಳು ಮಾತ್ರ ಆನಿ ಓಡಿದಂತೆ ಸಪ್ಪಳಿಸುತಿದ್ದವು. ಬೀರ ನಡು ಹೊಳ್ಯಾಗ ನಿಂತವನು ಬಲಗೈಲಿ ಅಂಜುನ ಗಟ್ಟಿಗೆ ಹಿಡಿದಿದ್ದ. ಎಡಗೈಲಿ ದೇವ್ರನ್ನ ಎದಿಗೆ ಆನಿಸಿ ಬಿಗಿದಪ್ಪಿದ್ದ. ಉಕ್ಕೇರಿದಂಗ ಹೊಳಿ ಉಕ್ಕುತ್ತಲೇ ಇತ್ತು. ಎದಿಮಟ ನೀರು ಬಂದಿದ್ದೇ ತಡ. ಆಕಾಶ ದಿಟ್ಟಿಸಿದ. ಅಪ್ಪ ನಕ್ಕಂಗಾಗಿ ದೊಡ್ಡ ಚುಕ್ಕಿವೊಂದು ಹೊಳಿಮ್ಯಾಲ ಪಳಕ್ಕನ ಉದ್ರಿತು. ದಂಡಿಮ್ಯಾಲಿನ ಮಂದಿ 'ಚುಕ್ಕಿ ಉದ್ರೈತೆಂದ್ರ ಅಪ್ಪನ ಶಕ್ತಿ ದೊಡ್ಡದೈತಿ.. ಬೀರ ತುಂಬಿದ ಹೊಳ್ಯಾಗ ದೇವ್ರುನ ಹೊತ್ತು ನಡಿಯೋದಂದ್ರ ಇದೆಲ್ಲಾ ದಾನಪ್ಪನ ಪವಾಡನೇ..' ಅಂತ ದೂರದಿಂದ ತುಂಬಿದ ಹೊಳಿಗೆ ಕೈಮುಗಿಯತೊಡಗಿದ್ರು. ಈಗ ನೀರು ಕುತ್ತಿಗಿಮಟ ಬಂದ್ವು. ಬೆನ್ನಹಿಂದೆ ಗಟ್ಟಿಯಾಗಿ ಹೆಗಲಿಡಿದ ಅಂಜುನ ನೋಡಿದ. ತನಗಿಂತ ಎತ್ತರ ಕಮ್ಮಿ ಇದ್ದವಳು ತೆರೆ ಬಡಿತಕ್ಕೆ ಬಾಯೊಳಗ ನೀರೋಗಿ ಅಬುಕ್‌ಅಬುಕ್ ಅನ್ನತೊಡಗಿದ್ಲು. ದೇವ್ರನ್ನಹೊತ್ತ ಬೀರ ಸುತ್ತ ನೋಡಿದ. ಬೆಳದಿಂಗಳಿಗೆ ಹೊಳಿಮುಗಿಲು ಒಂದಾಗಿತ್ತು. 'ನಡು ಹೊಳ್ಯಾಗ ದೇವ್ರನ್ನ ದಡಲ್ ದಪ್ಪಂತ ಕೆಡವಿ ಅಂಜುನ ಹೆಗಲಿಗೆ ಏರಿಸಿಕೊಂಡು ತುಂಬಿದ ಹೊಳಿನ ಈಸತೊಡಗಿದ. ಹೊಳಿಮಾತ್ರ ತನ್ನ ನಡು ಹೊಟ್ಟಿಮ್ಯಾಲ ದೇವ್ರನ್ನು ತೇಲಿಸಿಕೊಂಡು ಮಂತ್ರಾಲಯದ ದಿಕ್ಕಿನಕಡೆ ಓಡುತ್ತಲೇ ಇತ್ತು. ●